# CONSTITUTION DAY CELEBRATION

## 26-11-2022






## “ಭಾರತೀಯ ಎಂದೆನಿಸಿಕೊಳ್ಳಬೇಕಾದರೆ ಸಂವಿಧಾನದ ಕನಿಷ್ಠ ಜ್ಞಾನ ಅವಶ್ಯ”

**- ವಿಶ್ವನಾಥ್.ಕೆ**

ಭಾರತದ ಸಂವಿಧಾನ ಸಮಾಜದ ಕಟ್ಟಕಡೆಯ ವ್ಯಕ್ತಿಯ ಬಗೆಗೂ ಕಾಳಜಿ ವಹಿಸಿದ್ದು ದುರ್ಬಲರು ಅನ್ಯಾಯದ ಬಗ್ಗೆ ದನಿ ಎತ್ತಲು ಮೂಲಭೂತ ಹಕ್ಕುಗಳ ಮೂಲಕ ಅವಕಾಶ ಕಲ್ಪಿಸಿದೆ. ಭಾರತೀಯ ಎಂದೆನಿಸಿಕೊಳ್ಳಬೇಕಾದರೆ ಸಂವಿಧಾನದ ಕನಿಷ್ಟ ಜ್ಞಾನ ಅವಶ್ಯ. ಮತದಿಂದ ಮಾತ್ರ ಬದಲಾವಣೆ ಸಾಧ್ಯವಿರುವುದರಿಂದ ಪ್ರತಿಯೊಬ್ಬ ಪ್ರಜೆ ಚುನಾವಣೆಯಲ್ಲಿ ಮತ ಚಲಾಯಿಸುವಾಗ ಪ್ರಜ್ಞಾವಂತಿಕೆಯಿಂದ ವರ್ತಿಸಬೇಕು. ಇಂದು ನಾವು ಅನೇಕ ಸವಲತ್ತುಗಳನ್ನು ಅನುಭವಿಸುತ್ತಿರುವುದು ಉತ್ತಮ ಸಂವಿಧಾನ ಹೊಂದಿರುವುದರಿಂದ ಎಂದು ಮೈಸೂರಿನ ಮಂಡಿ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಆದ ಶ್ರೀ.ವಿಶ್ವನಾಥ್.ಕೆ ಅವರು ಹೇಳಿದರು.

ನಗರದ ಶೇಷಾದ್ರಿ ಐಯ್ಯರ್ ರಸ್ತೆಯಲ್ಲಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಐಕ್ಯೂಎಸಿ ಘಟಕ ಹಾಗೂ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಭಾಗವಹಿಸಿ ಮಾತನಾಡುತ್ತಿದ್ದರು. ೨೬ನೇ ನವಂಬರ್ ೧೯೪೯ರಂದು ಸಂವಿಧಾನ ಅಂಗೀಕಾರವಾದ ಸವಿನೆನಪಿಗಾಗಿ ನವಂಬರ್ ೨೬ ಅನ್ನು ಪ್ರತಿವರ್ಷ ಸಂವಿಧಾನ ದಿನವನ್ನಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಸಂವಿಧಾನದ ರಚನೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್, ಡಾ.ರಾಜೇಂದ್ರ ಪ್ರಸಾದ್, ನ್ಯಾಯಮೂರ್ತಿ ಬಿ.ಎನ್.ರಾವ್ ಹಾಗೂ ಇನ್ನೂ ಅನೇಕರ ಪರಿಶ್ರಮವಿದೆ. ಸಂವಿಧಾನ ನಿರ್ಮಾತೃಗಳ ದೂರದೃಷ್ಟಿ ಎಷ್ಟಿದೆ ಎಂದರೆ ಸಂವಿಧಾನದ ಮೂಲ ಪ್ರತಿ ೨೩೪ ಪುಟಗಳಿದ್ದು ಅದನ್ನು ಕ್ಯಾಲಿಗ್ರಫಿಯಲ್ಲಿ ಕೈ ಬರಹದ ಮೂಲಕ ಬರೆದಿದ್ದು ಒಟ್ಟು ೧೩ಕೆಜಿ ತೂಕವಿದೆ, ೧೦೦೦ ವರ್ಷಗಳಾದರೂ ಹಾಳಾಗದ ಹಾಗೆ ಸಂಸತ್ತಿನ ಗ್ರಂಥಾಲಯದಲ್ಲಿ ಹೀಲಿಯಮ್ ಕಂಟೈನರ್‌ನಲ್ಲಿ ಸಂರಕ್ಷಿಸಿಡಲಾಗಿದೆ. ನಮ್ಮ ಸಂವಿಧಾನ ಜಗತ್ತಿನ ಬೃಹತ್ ಲಿಖಿತ ಸಂವಿಧಾನವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಪ್ರಾಚಾರ್ಯರಾದ ಡಾ.ಎಸ್.ಮರೀಗೌಡರು ಅಧ್ಯಕ್ಷೀಯ ನುಡಿಗಳನ್ನಾಡುತ್ತಾ ನಮಗಾಗಿ ಉತ್ತಮ ವ್ಯವಸ್ಥೆಯನ್ನು ನಾವೇ ಅಳವಡಿಸಿಕೊಂಡಿರುವುದೇ ಸಂವಿಧಾನ. ಪ್ರಸ್ತಾವನೆಗೆ ೧೯೭೬ರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ೪೨ನೇ ತಿದ್ದುಪಡಿ ತಂದು ಸಮಾಜವಾದಿ, ಜಾತ್ಯತೀತ, ಸಮಗ್ರತೆ ಪದಗಳನ್ನು ಸೇರಿಸಲಾಯಿತು. ಹಕ್ಕುಗಳನ್ನು ಅನುಭವಿಸುವ ಜೊತೆಗೆ ಪ್ರತಿಯೊಬ್ಬರು ಕರ್ತವ್ಯಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದರು.

ರಾಜ್ಯಶಾಸ್ತ್ರದ ವಿಭಾಗದ ಮುಖ್ಯಸ್ಥರಾದ ಡಾ.ಬಿ.ಟಿ.ರಘುರವರು ಪ್ರಾಸ್ತಾವಿಕ ನುಡಿಗಳನ್ನಾಡಿ ಕಾರ್ಯಕ್ರಮದಲ್ಲಿ ಹಾಜರಿದ್ದ ಗಣ್ಯರನ್ನು ಸ್ವಾಗತಿಸಿದರೆ ಕಾರ್ಯಕ್ರಮದ ಸಂಚಾಲಕರಾದ ಪ್ರೊ.ಮೋಹನ್‌ಕುಮಾರ್.ಎನ್ ಅವರು ನಿರೂಪಿಸಿದರು. ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದ ಕಾರ್ಯಕ್ರಮವನ್ನು ಅಧ್ಯಾಪಕ ಸಲಹೆಗಾರರಾದ ಪ್ರೊ.ಸತೀಶ್.ಟಿ. ಅವರು ವಂದಿಸಿದರು.


ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.
"ಸಂವಿಧಾನ ದಿನಾಚರಣೆ"
ದಿನಾಂಕ: 26.11.2022
ಸಮಯ: 11.00 ಗಂಟೆಗೆ
ಡಾ.ರಘು.ಬಿ.ಟಿ
ಶ್ರೀ.ವಿಶ್ವನಾಥ್.ಕೆ
ಡಾ.ಎಸ್.ಮರೀಗೌಡ
ಶ್ರೀ. ಸತೀಶ್ ಟಿ


"ಸಂವಿಧಾನ ದಿನಾಚರಣೆ"
ದಿನಾಂಕ: 26.11.2022
ಸಮಯ: 11.00 ಗಂಟೆಗೆ


ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.
"ಸಂವಿಧಾನ ದಿನಾಚರಣೆ"
ದಿನಾಂಕ: 26.11.2022
ಸಮಯ: 11.00 ಗಂಟೆಗೆ








"ಸಂವಿಧಾನ ದಿನಾಚರಣೆ"


"ಸಂವಿಧಾನ ದಿನಾಚರಣೆ"














ಡಾ.ರಘು.ಬಿ.ಟಿ
ಶ್ರೀ.ವಿಶ್ವನಾಥ್.ಕೆ
ಡಾ.ಎಸ್.ಮರೀಗೌಡ










ದಿನಾಂಕ : 26.11.2022
ಡಾ. ರಘು. ಬಿ.ಟಿ
ಶ್ರೀ. ವಿಶ್ವನಾಥ್ ಕೆ
ಡಾ. ಎಸ್. ಮರೀಗೌಡ
ಶ್ರೀ. ಸತೀಶ್ ಟಿ








ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.
ಐಕ್ಯೂಎಸಿ ಘಟಕ ಹಾಗೂ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ
"ಸಂವಿಧಾನ ದಿನಾಚರಣೆ"
ದಿನಾಂಕ : 26.11.2022
ಸಮಯ : 11.00 ಗಂಟೆಗೆ